ಆ) ಬಂದಿದ್ದಲ್ಲಿ ದುರಸ್ತಿ ಕೆಲಸ ಕೈಗೊಳ್ಳಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಗಮನಕ್ಕೆ ಬಂದಿದೆ

ಆ) ಆಲಮಟ್ಟಿ – ಬಾಗಲಕೋಟೆ ರಸ್ತೆಯನ್ನು ರಾಜ್ಯ ಹೆದ್ದಾರಿ ದರ್ಜೆಗೆ ಸುಧಾರಣೆ ಮಾಡಲು ಬೇಕಾಗುವ ಅಂದಾಜು ಮೊತ್ತ ರೂ 17 09 ಕೋಟಿಗಳಿಗೆ ನಿಗಮದ ನಿರ್ದೇಶಕರ ಮಂಡಳಿಯು ಅನುಮೋದನೆ ನೀಡಿರುತ್ತದೆ

ಸದರಿ ರಸ್ತೆ ಸುಧಾರಣೆ ಕಾಮಗಾರಿಗಾಗಿ ದಿನಾಂಕ 13–12–2006 ರಂದು ಟೆಂಡರ್ ಕರೆಯಲಾಗಿತ್ತು ಸ್ವೀಕರಿಸಲಾದ ಟೆಂಡರ್‌ಗಳ ಮೊತ್ತ ಅತಿ ಹೆಚ್ಚಾದುದರಿಂದ ತಾಂತ್ರಿಕ ಉಪ ಸಮಿತಿಯು ಟೆಂಡರ್‌ನ್ನು ರದ್ದುಪಡಿಸಿ, ಪುನಃ ಟೆಂಡರ್ ಕರೆಯಲು ಸೂಚಿಸಿರುವ ಹಿನ್ನೆಲೆಯಲ್ಲಿ, ದಿನಾಂಕ 6–03–2007 ರಂದು ಪುನಃ ಟೆಂಡರ್ ಕರೆಯಲಾಗಿರುತ್ತದೆ.

1599 (2222) ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಪ್ರಸಕ್ತ ಸಾಲಿನಲ್ಲಿ ಡಾ॥ ನಂಜುಂಡಪ್ಪನವರ ವರದಿ ಆಧಾರದ ಪ್ರಕಾರ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಎಷ್ಟು ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ (ಪಟ್ಟಿ ನೀಡುವುದು),

ಆ) ಕೆಲವು ಮತಕ್ಷೇತ್ರಗಳಿಗೆ ಯಾವ ಕಾರಣಕ್ಕಾಗಿ ಪ್ರೌಢಶಾಲೆಗಳನ್ನು ನೀಡಿರುವುದಿಲ್ಲ,

ಇ) ಕೆಲವು ಕ್ಷೇತ್ರಗಳಿಗೆ ಒಂದೇ ಪ್ರೌಢಶಾಲೆ ನೀಡಲು ಕಾರಣವೇನು?

ಶ್ರೀ ಬಸವರಾಜ್ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು).

ಅ) 2006–07 ನೇ ಸಾಲಿನಲ್ಲಿ ಡಾ॥ ನಂಜುಂಡಪ್ಪ ವರದಿಯಲ್ಲಿ ಗುರುತಿಸಲಾಗಿರುವಂತೆ ಹಿಂದುಳಿದ, ಅತಿ ಹಿಂದುಳಿದ ಹಾಗೂ ಅತ್ಯಂತ ಹಿಂದುಳಿದ

ತಾಲ್ಲೂಕುಗಳಿಗೆ ಪ್ರೌಢಶಾಲೆಗಳನ್ನು ಮಂಜೂರು ಮಾಡಿದ ಪಟ್ಟಿ ಲಗತ್ತಿಸಿದೆ

ಆ) ಮತ್ತು ಇ) ಆಯಾಯಾ ಸ್ಥಳಗಳ ಶೈಕ್ಷಣಿಕ ಅಗತ್ಯತೆ ಮತ್ತು ಆಯವ್ಯಯದಲ್ಲಿನ ಅವಕಾಶದ ಪ್ರಕಾರ ಹಂತ ಹಂತವಾಗಿ ಶಾಲೆಗಳನ್ನು ಮಂಜೂರು ಮಾಡಲಾಗುತ್ತಿದ್ದು, ಇದೊಂದು ಸತತವಾದ ಪ್ರಕ್ರಿಯೆಯಾಗಿದೆ

1600 (2224) ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) – ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲಪ್ರಭಾ ನದಿಗೆ ಕಟ್ಟಲಾದ' ಬ್ಯಾರೇಜುಗಳು ಎಷ್ಟು,

ಆ) ಇನ್ನೂ ಕಟ್ಟಲು ಸ್ಥಳ ಪರಿಶೀಲನೆ ಮಾಡಿರುವುದು ಎಷ್ಟು,

ಇ) ಪ್ರತಿ 5 ಕಿಲೋ ಮೀಟರ್‌ಗೆ ಒಂದರಂತೆ ಬ್ಯಾರೇಜ್ ಕಟ್ಟಲು ಸರ್ಕಾರ ಚಿಂತನೆ ಮಾಡುವುದೇ,

ಈ) ಅದು ಅನುಷ್ಠಾನಕ್ಕೆ ಯಾವಾಗ ಬರುವುದು?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಜಲಸಂಪನ್ಮೂಲ ಇಲಾಖೆಯಿಂದ (ಬೃಹತ್ ಮತ್ತು ಮಧ್ಯಮ ನೀರಾವರಿ) ಮಲಪ್ರಭಾ ನದಿಗೆ ಅಡ್ಡಲಾಗಿ ಯಾವುದೇ ಬ್ಯಾರೇಜ್‌ಗಳನ್ನು ಈವರೆಗೆ ನಿರ್ಮಿಸಲಾಗಿರುವುದಿಲ್ಲ

ಆ) ಮಲಪ್ರಭಾ ನದಿಗೆ ಅಡ್ಡಲಾಗಿ ನಮ್ಮೂರು ಬಾಂಧಾರ ಯೋಜನೆಯಡಿ 5 ಬಾಂಧಾರಗಳನ್ನು ನಿರ್ಮಿಸಲು ಈಗಾಗಲೇ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ ಇದಲ್ಲದೇ ಇನ್ಯಾವುದೇ ಹೊಸ ಬ್ಯಾರೇಜ್‌ಗಳ ನಿರ್ಮಾಣದ ಕುರಿತು ಸ್ಥಳ ಪರಿಶೀಲನೆ ಮಾಡಿರುವುದಿಲ್ಲ

ಇ) ಭೌಗೋಳಿಕ, ತಾಂತ್ರಿಕ, ಆರ್ಥಿಕ ಮತ್ತು ನೀರಿನ ಹಂಚಿಕೆಗಳ ಮೇಲೆ ಇದು ಅವಲಂಬಿಸುತ್ತಿದ್ದು, ಸದ್ಯಕ್ಕೆ ಪ್ರತಿ 5 ಕಿ.ಮೀ ಅಂತರದಲ್ಲಿ ಮಲಪ್ರಭಾ ನದಿಯ ಮೇಲೆ ಬ್ಯಾರೇಜ್‌ಗಳ ನಿರ್ಮಾಣದ ಕುರಿತು ಚಿಂತನೆಗಳು ನಡೆದಿರುವುದಿಲ್ಲ